ಹಿಂದುಳಿದ ವರ್ಗದ ವಿದ್ಯಾರ್ಥಿ ವೇತನದ ಬಗ್ಗೆ.

615 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ದೊರೆಯದಂತಹ ತೊಂದರೆಯ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ;*

ಆ) *ಕಾಲೇಜು ಅಕೌಂಟಿಗೆ ಹಣ ಪಾವತಿ ಮಾಡಿದರೆ ವಿದ್ಯಾರ್ಥಿಗಳಿಗೆ ಹಣ ಪಾವತಿ ಮಾಡುವುದು ಸಾಧ್ಯವೆಂದು ಕಾಲೇಜಿನವರು ತಿಳಿಸಿರುವ ವಿಚಾರ ಸರಕಾರಕ್ಕೆ ತಿಳಿದಿದೆಯೇ;*

ಇ) *ಕಾಲೇಜಿನ ಜಂಟಿ ಅಕೌಂಟಿನ ಬದಲು ಕಾಲೇಜು ಅಕೌಂಟಿಗೆ ವಿದ್ಯಾರ್ಥಿವೇತನ ಪಾವತಿ ಮಾಡುವುದರಿಂದ ಈ ಸಮಸ್ಯೆ ಪಾವತಿ ಮಾಡುವುದರಿಂದ ಈ ಸಮಸ್ಯೆ ಬಗೆಹರಿಸಬಹುದೆಂಬುದು ಸರಕಾರದ ಗಮನಕ್ಕೆ ಬಂದಿದೆಯೇ;*

ಈ) *ಬೇರೆ ಜಿಲ್ಲೆಗಳಲ್ಲಿ ಈ ಪದ್ಧತಿಯಿಂದ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವೇತನ ಮಾಡಲಾಗುವುದಾದರೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯಾರ್ಥಿವೇತನ ಪಾವತಿಯಾಗದೆ ಇರುವ ತೊಡಕನ್ನು ಸರಕಾರ ಯಾವ ರೀತಿಯಲ್ಲಿ ಮತ್ತು ಯಾವಾಗ ನಿವಾರಿಸುವುದು?*

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ.

ಈ) ವಿದ್ಯಾರ್ಥಿವೇತನದ ಪಾವತಿಯಾಗದೆ ಇರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿಲ್ಲದೆ ಇರುವುದರಿಂದ ತೊಡಕನ್ನು ನಿವಾರಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಒಂದೇ ರೀತಿಯ ನೀತಿಯನ್ನು ಅನುಸರಿಸಲಾಗುತ್ತಿದೆ.

ದೊಡ್ಡ ಬಳ್ಳಾಪುರ ಕ್ಷೇತ್ರದಿಂದ ವಿಶ್ವಯೋಜನೆಯಲ್ಲಿ ಸಹಾಯಕ್ಕಾಗಿ ಬಂದ ಅರ್ಜಿಗಳು.

546 - ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡ ಬಳ್ಳಾಪುರ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಎ) *ವಿಶ್ವ ಯೋಜನೆ ಪ್ರಾರಂಭವಾದಾಗಿನಿಂದ ದೊಡ್ಡ ಬಳ್ಳಾಪುರ ಕ್ಷೇತ್ರದಿಂದ ವಿಶ್ವ ಯೋಜನೆಯಡಿಯಲ್ಲಿ ಸಹಾಯಕ್ಕಾಗಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ:*

ಬಿ) *ಅವರಲ್ಲಿ ಪ್ರಯೋಜನೆ ಪಡೆದವರ ಸಂಖ್ಯೆ :*

ಸಿ) *ಅವರಿಗೆ ಬ್ಯಾಂಕ್ ಮತ್ತು ಸರ್ಕಾರದಿಂದ ದೊರತ ಸಹಾಯ.*

ಡಿ) *ಅರ್ಜಿದಾರರ ಹೆಸರು ಮತ್ತು ಮೇಲ್ಕಂಡ ವಿಶ್ವ ಯೋಜನೆಯನ್ವಯ ಫಲಾನುಭವಿಗಳ ಹೆಸರು (ಪೂರ್ಣ ವಿವರಗಳೊಂದಿಗೆ) ಒದಗಿಸಬೇಕು.*

ಇ) *ಯಾವ ಯಾವ ಕೈಗಾರಿಕೆಗಳಿಗೆ ಅರ್ಜಿಗಳು ಬಂದಿವೆ?*

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):

ಎ) 80

ಬಿ) 46

ಸಿ) ಬ್ಯಾಂಕಿನಿಂದ ಮತ್ತು ಸರ್ಕಾರದಿಂದ ಒಟ್ಟು ದೊರೆತ ಸಹಾಯಧನ ರೂ.16.17 ಲಕ್ಷಗಳು.

ಡಿ) ವಿವರಗಳನ್ನು ಅನುಬಂಧ -ಎ ದಲ್ಲಿ ಲಗತ್ತಿಸಲಾಗಿದೆ.

ಇ) 1) ವಿದ್ಯುತ್ ಮಗ್ಗ 2) ಕುಂಬಾರಿಕೆ
3) ಕಂಬಳಿ ನೇಯ್ಗೆ 4) ಸಿದ್ದ ಉಡುಪುಗಳ ತಯಾರಿಕೆ.